

بِسۡمِ اللّٰہِ الرَّحۡمٰنِ الرَّحِیۡم

# ಯು.ಕೆ. ಜಲ್ಸ ಸಾಲಾನ – 2019

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಆಲ್‌ಟನ್‌ನ **'ಹದೀಖತುಲ್ ಮಹ್‌ದಿ'**ಯಿಂದ 02–08–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

اَشۡهَدُ اَنۡ لَّا اِلٰهَ اِلَّا اللّٰهُ وَحۡدَهٗ لَا شَرِيۡكَ لَهٗ وَ اَشۡهَدُ اَنَّ مُحَمَّدًا عَبۡدُهٗ وَرَسُوۡلُهٗ۔ اَمَّا بَعۡدُ

فَاَعُوۡذُ بِاللّٰهِ مِنَ الشَّيۡطٰنِ الرَّجِيۡمِ۔ بِسۡمِ اللّٰهِ الرَّحۡمٰنِ الرَّحِيۡمِ۔

اَلۡحَمۡدُ لِلّٰهِ رَبِّ الۡعٰلَمِيۡنَ ۙ﴿۲﴾ الرَّحۡمٰنِ الرَّحِيۡمِ ۙ﴿۳﴾ مٰلِكِ يَوۡمِ الدِّيۡنِ ؕ﴿۴﴾ اِيَّاكَ نَعۡبُدُ وَ اِيَّاكَ نَسۡتَعِيۡنُ ؕ﴿۵﴾

اِهۡدِنَا الصِّرَاطَ الۡمُسۡتَقِيۡمَ ۙ﴿۶﴾ صِرَاطَ الَّذِيۡنَ اَنۡعَمۡتَ عَلَيۡهِمۡ ۙ۬ غَيۡرِ الۡمَغۡضُوۡبِ عَلَيۡهِمۡ وَلَا الضَّآلِّيۡنَ ﴿۷﴾

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ಈ ದಿನ ನಮಗೆ ಯು.ಕೆ. ಜಲ್ಸ ಸಾಲಾನದಲ್ಲಿ ಭಾಗವಹಿಸುವ ಭಾಗ್ಯವನ್ನು ಪುನಃ ದಯಪಾಲಿಸುತ್ತಿದ್ದಾನೆ. ಕಳೆದ ತಿಂಗಳಲ್ಲಿ ಅಮೇರಿಕ, ಕೆನಡ ಮತ್ತು ಜರ್ಮನಿಯ ಜಲ್ಸಗಳು ಜರಗಿದುವು. ಲೋಕದ ಬೇರೆ ಅನೇಕ ದೇಶಗಳಲ್ಲಿಯೂ ಜಲ್ಸಗಳು ಜರಗಿದುವು. ಪ್ರತಿ ಸ್ಥಳದಲ್ಲಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನಗಳ ಪ್ರಕಾರ ಅವನ ಬೆಂಬಲದ, ಅವನ ಸಹಾಯದ ವೈಭವಶಾಲಿ ದೃಶ್ಯಗಳನ್ನು ಕಂಡೆವು. ಹೀಗಿದ್ದರೂ ಯು.ಕೆ.ಯ ಜಲ್ಸ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಲೋಕದ ದೃಷ್ಟಿ ಈ ಜಲ್ಸದ ಕಡೆಗಿರುತ್ತದೆ – ನಮ್ಮವರ ಮತ್ತು ಅನ್ಯರ ದೃಷ್ಟಿಗಳು ಸಹ. ಪ್ರತಿಯೊಂದು ರೀತಿಯಲ್ಲಿಯೂ ಇಲ್ಲಿನ ಜಲ್ಸಕ್ಕೆ ಅಂತರ್ರಾಷ್ಟ್ರೀಯ ಜಲ್ಸದ ಸ್ಥಾನ ನೀಡಲಾಗುತ್ತಿದೆ. ಏಕೆಂದರೆ ಖಿಲಾಫತ್ ಕೇಂದ್ರ ಇಲ್ಲಿದೆ. ಆದುದರಿಂದ ಲೋಕದ ವಿವಿಧ ದೇಶಗಳಿಂದ ನಮ್ಮವರೂ ಅನ್ಯರೂ ಯು.ಕೆ.ಯ ಜಲ್ಸದಲ್ಲಿ ಭಾಗವಹಿಸಲು ಪ್ರಯತ್ನಿಸುತ್ತಾರೆ. ಈ ಕಾರಣದಿಂದ ಈ ಜಲ್ಸದ ಕಾರ್ಯಕರ್ತರ ಹೊಣೆಗಾರಿಕೆಗಳು ಸಹ ಬಹಳ ವರ್ಧಿಸುತ್ತವೆ. ಇಲ್ಲಿ ಹದೀಖತುಲ್ ಮಹ್‌ದಿಯಲ್ಲಿ ನಿರ್ಮಿಸಲಾದ ತಾತ್ಕಾಲಿಕ ಪಟ್ಟಣದ ವ್ಯವಸ್ಥೆ ಸಹ ವಿಶಿಷ್ಟವಾದ ಶ್ರದ್ಧೆಯನ್ನು ಆವಶ್ಯಪಡುತ್ತದೆ. ಆದುದರಿಂದ ನಾನು ಕಾರ್ಯಕರ್ತರ ಡ್ಯೂಟಿಯ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ಅವರ ಶ್ರದ್ಧೆ ಸೆಳೆಯಲು ಪ್ರಯತ್ನಿಸುತ್ತಾ ಇರುತ್ತೇನೆ. ಈಗ ನಾನು ಇದಕ್ಕೆ ಸಂಬಂಧಿಸಿ ಮೊದಲು ಮಾತನಾಡುವೆನು.

ಖಿಲಾಫತ್ ಕೇಂದ್ರ ಇಲ್ಲಿಗೆ ವರ್ಗಾಯಿಸಲ್ಪಟ್ಟ ನಂತರ ಕಳೆದ ಮೂವತ್ತೈದು ವರ್ಷಗಳಿಂದ ಆಯಾಕಾಲದ ಖಲೀಫರ ಉಪಸ್ಥಿತಿಯಲ್ಲಿ ಯು.ಕೆ.ಯಲ್ಲಿ ವಾಸಿಸುವ ಅಹ್ಮದಿಯರಾದ ವೃದ್ಧರು, ಯುವಜನರು, ಬಾಲಕರು, ಮಹಿಳೆಯರು ಮತ್ತು ಬಾಲಿಕೆಯರು ಜಲ್ಸದ ವ್ಯವಸ್ಥೆಯಲ್ಲಿ ಭಾಗವಹಿಸಿ ಬಹಳ ಸಂತೋಷದಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇಂದು ನಾವು ನೋಡುತ್ತಿದ್ದೇವೆ, ಇಲ್ಲಿನ ಕಾರ್ಯಕರ್ತರು ಪ್ರಾಯಶಃ ರಬ್ವದ ಕಾರ್ಯಕರ್ತರಿಗೆ ಸಹ ಸಹಾಯ ನೀಡುವಷ್ಟು ಸಾಮರ್ಥ್ಯ ಹೊಂದಿದ್ದಾರೆ. ಅಂದಿನ ಕಾಲ ಹೇಗಿತ್ತು. ನಾಲ್ಕೈದು ಸಾವಿರ ಜನರಿಗೆ ಆಹಾರ ನೀಡುವುದು ಜಲ್ಸದ ವ್ಯವಸ್ಥೆಗೆ ಒಂದು ಪಂಥಾಹ್ವಾನವಾಗಿತ್ತು. ಶೇಕಡಾ ತೊಂಬತ್ತರಷ್ಟು ರೊಟ್ಟಿಗಳನ್ನು ಬಜಾರಿನಿಂದ ಖರೀದಿಸಲಾಗುತ್ತಿತ್ತು. ಆದರೆ ಈಗಿನ ಸ್ಥಿತಿ ನೋಡಿರಿ, ಅಲ್ಲಾಹನ ಅನುಗ್ರಹದಿಂದ ಮೂತ್ತೈದು–ನಲ್ವತ್ತು ಸಾವಿರ ಜನರಿಗೆ ರೊಟ್ಟಿಗಳನ್ನು ಕಾರ್ಯಕರ್ತರೇ ಸ್ವತಃ ತಯಾರಿಸುತ್ತಾರೆ. ಲಕ್ಷಗಟ್ಟಲೆ ಸಂಖ್ಯೆಯಲ್ಲಿ ರೊಟ್ಟಿಗಳು ತಯಾರಿಸಲ್ಪಡುತ್ತವೆ. ನಾನು ಆಗಾಗ ಪರಿಶೋಧಿಸುತ್ತೇನೆ. ಜನರಿಗೆ ರೊಟ್ಟಿಗಳು ಇಷ್ಟಕರವಾಗಿವೆ. ನಾನು ಸಹ ಈ ರೊಟ್ಟಿಗಳನ್ನು ಇಷ್ಟಪಡುತ್ತೇನೆ. ಈಗ ತಯಾರಿಸಲ್ಪಡುವ ರೊಟ್ಟಿಗಳು ಹಿಂದಿನ ಕಾಲದಲ್ಲಿ ತಯಾರಿಸಲ್ಪಡುತ್ತಿದ್ದ ರೊಟ್ಟಿಗಳಿಗಿಂತ ಬಹಳ ಉತ್ತಮವಾಗಿವೆ. ಈ ಕೆಲಸ ಮಾಡುವ ಯುವ ಜನರಿಗೆ ಅವರ ವೃತ್ತಿಯಲ್ಲಿ ಇನ್ನಷ್ಟು ನೈಪುಣ್ಯವನ್ನು ಅಲ್ಲಾಹನು ನೀಡುವವನಾಗಲಿ. ಅವರ ಬುದ್ಧಿಶಕ್ತಿಯನ್ನು ವರ್ಧಿಸುತ್ತಾ ಇರಲಿ ಮತ್ತು ಅವರು ಜಲ್ಸದ ಅತಿಥಿಗಳಿಗೆ ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಸೇವೆ ಮಾಡುವವರಾಗಲಿ.

ಅದೇ ರೀತಿ ಲಂಗರ್‌ಖಾನದಲ್ಲಿ ಆಹಾರ ಸಿದ್ಧಪಡಿಸುವ ತಂಡಗಳು ಅವರು ತಮ್ಮ ಇನ್‌ಚಾರ್ಜ್ ಅಧಿಕಾರಿಗಳ ಜೊತೆಗೆ ಬಹಳ ಕಷ್ಟಪಟ್ಟು ಶ್ರದ್ಧೆಯಿಂದ ಕೆಲಸ ಮಾಡುತ್ತಾ ಇದ್ದಾರೆ. ಲಂಗರ್ ಖಾನದಲ್ಲಿರುವ ದೇಗ್‌ಗಳನ್ನು ತೊಳೆಯುವ ವಿಭಾಗ ಬಹಳ ದೊಡ್ಡದಾಗಿದ್ದು ಬಹಳ ಕಷ್ಟಪಟ್ಟು ಅವರು ಈ ಕೆಲಸ ಮಾಡುತ್ತಾರೆ. ಖಾದಿಯಾನ್‌ನಲ್ಲಿ ಈ ಕೆಲಸ ಕಾರ್ಮಿಕರಿಗೆ ಮಜೂರಿ ನೀಡಿ ಮಾಡಲಾಗುತ್ತಿದೆ. ಆದರೆ ಇಲ್ಲಿನ ಕಾರ್ಯಕರ್ತರು ಬಹಳ ಉತ್ಸಾಹದಿಂದ ಈ ಕೆಲಸ ಮಾಡುತ್ತಾರೆ. ಊಟ ಸರಬರಾಜು ಮಾಡುವ ವಿಭಾಗದವರು ಸಹ ಕಳೆದ ವರ್ಷಕ್ಕಿಂತ ಉತ್ತಮವಾಗಿ ಕೆಲಸ ಮಾಡಲು ಪ್ರಯತ್ನಿಸುತ್ತಿದ್ದಾರೆ. ಊಟ ಮಾಡುವ ಸ್ಥಳದ ಮಾರ್ಕಿಗಳನ್ನು ದೊಡ್ಡದಾಗಿ ನಿರ್ಮಿಸಲಾಗಿದೆ. ಅತಿಥಿಗಳು ಹೆಚ್ಚು ಕಾಯದೆ ಸುಖವಾಗಿ ಊಟ ಮಾಡುವ ವ್ಯವಸ್ಥೆ ಮಾಡಲಾಗಿದೆ.

ಹಾಗೆಯೇ ಸ್ವಚ್ಛತೆ ಮತ್ತು ನೈರ್ಮಲ್ಯದ ವಿಭಾಗವಿದೆ. ಕಾರ್ ಪಾರ್ಕಿಂಗ್ ವಿಭಾಗವಿದೆ. ಟ್ರಾಫಿಕ್ ವಿಭಾಗವಿದೆ. ಜಲ್ಸಗಾಹ್‌ನ ಒಳಗೆ ಅನೇಕ ವಿಭಾಗಗಳಿವೆ. ಭದ್ರತೆಯ ಅತ್ಯಂತ ಮುಖ್ಯ ವಿಭಾಗವಿದೆ. ವಿವಿಧ ವಿಭಾಗಗಳು ತಮ್ಮದೇ ಆಗಿರುವ ಮಹತ್ವ ಹೊಂದಿದೆ. ಈ ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡುವ ಭಾಗ್ಯ ಕಾರ್ಯಕರ್ತರಿಗೆ ಲಭಿಸುತ್ತಾ ಇದೆ. ಅದೇ ರೀತಿ ಕಾರ್ಯಕರ್ತೆಯರಿಗೂ ಕೆಲಸ ಮಾಡುವ ಭಾಗ್ಯ ಲಭಿಸುತ್ತಿದೆ. ಅಲ್ಲಾಹನು ಇವರೆಲ್ಲರಿಗೂ ಅತ್ಯುತ್ತಮ ರೀತಿಯಲ್ಲಿ ಕೆಲಸ ಮಾಡುವ ಭಾಗ್ಯ ನೀಡಲಿ. ನಾನು ಯಾವಾಗಲೂ ಹೇಳುತ್ತಿದ್ದ ಹಾಗೆ ಪುನಃ ಹೇಳುತ್ತೇನೆ. ನೀವು ಎಷ್ಟು ಉತ್ಸಾಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳ

ಸೇವೆಗೋಸ್ಕರ ನಿಮ್ಮನ್ನು ಅರ್ಪಿಸಿರುವಿರೋ ಅದೇ ಉತ್ಸಾಹವನ್ನು ಜಲ್ಸದ ಕೊನೆಯ ಸಮಯದ ತನಕ ಸ್ಥಿರವಾಗಿ ನೆಲೆನಿಲ್ಲಿಸಿರಿ. ಅದು ನಿಮ್ಮ ಮುಖ ಚಹರೆಗಳ ಮಂದಹಾಸದಿಂದ ಮತ್ತು ಅತಿಥಿಗಳ ಜೊತೆಗೆ ಗೌರವಭಾವನೆಯಿಂದ ವರ್ತಿಸುವ ಮೂಲಕ ಪ್ರಕಟವಾಗಬೇಕು. ಆದುದರಿಂದ ವಿವಿಧ ಸ್ಥಳಗಳಲ್ಲಿ ಅತಿಥಿಗಳಿಗೋಸ್ಕರ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತರೂ ಕಾರ್ಯಕರ್ತೆಯರೂ ಯಾವಾಗಲೂ ನೆನಪಿನಲ್ಲಿರಿಸಬೇಕು, ಅವರು ದುಪ್ಪಟ್ಟು ಪುಣ್ಯ ಗಳಿಸುತ್ತಾ ಇದ್ದಾರೆ ಮತ್ತು ಅನುಗ್ರಹಗಳಿಗೆ ಪಾತ್ರರಾಗುತ್ತಿದ್ದಾರೆ ಎಂದು. ಅತಿಥಿ ಸತ್ಕಾರ ಅಲ್ಲಾಹನಿಗೆ ಬಹಳ ಪ್ರಿಯಕರವಾದುದಾಗಿದೆ. ಅದು ಅಲ್ಲಾಹನಿಗೆ ಎಷ್ಟು ಪ್ರಿಯಕರವಾಗಿದೆ ಎಂದರೆ ಅದರ ಬಗ್ಗೆ ಎರಡು ಸಾರಿ ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಹೇಳಿದ್ದಾನೆ. ಅತಿಥಿಗಳಿಗೆ ಆಹಾರ ನೀಡುವುದು ಒಂದು ಸಾಮಾನ್ಯ ವಿಷಯವಾಗಿರುತ್ತಿದ್ದರೆ ಪವಿತ್ರ ಖುರ್‌ಆನ್‌ನಲ್ಲಿ ಅತಿಥಿಗಳ ಆಗಮನದ ಪ್ರಸ್ತಾಪದೊಂದಿಗೆ ಪ್ರತಿ ಸಲ ಅವರಿಗೆ ಆಹಾರ ಒದಗಿಸಿದ ಬಗ್ಗೆಯೂ ಅಲ್ಲಾಹನು ಪ್ರಸ್ತಾಪಿಸುತ್ತಿರಲಿಲ್ಲ.

ಇದಕ್ಕೆ ಸಂಬಂಧಿಸಿ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿ ನಡೆವಳಿಕೆ ನಮ್ಮ ಮುಂದಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ಬಗ್ಗೆ ಮತ್ತು ಅಂತಿಮ ವಿಚಾರಣೆಯ ದಿನದ ಬಗ್ಗೆ ವಿಶ್ವಾಸ ಹೊಂದಿರುವವರು ಮಾಡಬೇಕಾದ ಮೂರು ಆಜ್ಞೆಗಳ ಪಾಲನೆಯ ಬಗ್ಗೆ ವಿವರಿಸಿದ್ದಾರೆ. ಅವುಗಳೆಲ್ಲವೂ ಒಬ್ಬರಿನ್ನೊಬ್ಬರ ಹಕ್ಕುಗಳಿಗೆ ಸಂಬಂಧಿಸಿವೆ. ಸಮಾಜವನ್ನು ಶಾಂತಿಭರಿತವನ್ನಾಗಿ ಮಾಡುವುದಕ್ಕೆ ಸಂಬಂಧಿಸಿವೆ. ಮೊದಲನೆಯ ಆಜ್ಞೆ ಒಳ್ಳೆಯ ಮಾತು ಹೇಳು ಅಥವಾ ಮೌನವನ್ನು ಅವಲಂಬಿಸು ಎಂಬುದಾಗಿದೆ. ಹರಟೆ ಮಾತುಗಳಿಂದ ಅಶಾಂತಿಯನ್ನು ಸೃಷ್ಟಿಸಬೇಡ. ಪರಸ್ಪರ ಮನಸ್ತಾಪ ಉಂಟುಮಾಡಬೇಡ. ಒಬ್ಬ ಸತ್ಯವಿಶ್ವಾಸಿ ನಿರರ್ಥಕವಾದ ಲಘುವಾದ ಮಾತುಗಳನ್ನಾಡುವುದಿಲ್ಲ. ಎರಡನೆಯ ಆಜ್ಞೆ, ನೆರೆಹೊರೆಯವನನ್ನು ಗೌರವಿಸಬೇಕು ಎಂದು. ನೆರೆಹೊರೆಯವನಿಗೆ ಬಹಳ ದೊಡ್ಡ ಹಕ್ಕು ಇರುತ್ತವೆ. ಅವನಿಗೆ ಗೌರವ ನೀಡಬೇಕು. ಅವನ ಬಗ್ಗೆ ಲಕ್ಷ್ಯನೀಡಬೇಕು. ಮೂರನೆಯ ಆಜ್ಞೆ, ಅತಿಥಿಗಳನ್ನು ಗೌರವಿಸಿರಿ ಎಂಬುದಾಗಿದೆ. ಇದು ಆತಿಥೇಯರಿಗೆ ಸಂಬಂಧಿಸಿದೆ. ಒಂದು ಶಾಂತಿ ಭರಿತ ಸಮಾಜದ ನಿರ್ಮಾಣಕ್ಕೆ ಇವುಗಳು ಅಸ್ತಿಭಾರಗಳಾಗಿವೆ. ಅಲ್ಲಾಹನ ಆಜ್ಞೆಗಳಲ್ಲೂ ಇವು ಸೇರಿವೆ ಮತ್ತು ಸತ್ಯವಿಶ್ವಾಸಿಯ ಚಿಹ್ನೆಗಳು ಅವುಗಳಾಗಿವೆ.

ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೆಚ್ಚು ಅತಿಥಿಗಳು ಬಂದಾಗ ಅವರನ್ನು ಸಹಾಬರಲ್ಲಿ ಹಂಚಲಾಗುತ್ತಿತ್ತು. ನಂತರ ಅವರು ಅತಿಥಿಗಳೊಂದಿಗೆ ಕೇಳುತ್ತಿದ್ದರು. ನಿಮ್ಮ ಸಹೋದರರು ನಿಮ್ಮ ಅತಿಥಿ ಸತ್ಕಾರ ಚೆನ್ನಾಗಿ ಮಾಡಿರುವರೋ ಎಂದು. ಸಹಾಬರು ಸಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ತರಬೇತಿ ಗಳಿಸಿದವರಾಗಿದ್ದರು. ಅವರಿಂದ ಅನುಗ್ರಹಗಳಿಸಿದ ಅವರು ಎಷ್ಟು ಚೆನ್ನಾಗಿ ಅತಿಥಿ ಸತ್ಕಾರ ಮಾಡುತ್ತಿದ್ದರೆಂದರೆ ಅತಿಥಿಗಳು ಹೇಳುತ್ತಿದ್ದರು– ನಮ್ಮ ಆತಿಥೇಯರು ನಮಗೆ ಅವರಿಗಿಂತ ಉತ್ತಮ ಆಹಾರ ನೀಡಿದರು. ನಮ್ಮನ್ನು ಚೆನ್ನಾಗಿ ನೋಡಿಕೊಂಡರು. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಸಹಾಬರು ಮಾಡುತ್ತಿದ್ದ ಅತಿಥಿ ಸತ್ಕಾರದ ರೀತಿ ಅದಾಗಿತ್ತು.

ಅತಿಥಿಗಳಿಗೆ ವಿಶಿಷ್ಟವಾಗಿ ಅತಿಥಿ ಸತ್ಕಾರ ಮಾಡುವವರನ್ನಾಗಿ ನಮ್ಮನ್ನು ಮಾಡಲಾಗಿದೆ. ಅಲ್ಲಾಹನು ತನ್ನ ಅನುಗ್ರಹದಿಂದ ಜಮಾಅತಿನ ಸಾಧನ ಸಂಪತ್ತುಗಳನ್ನು ಮೊದಲಿನ ಕಾಲಕ್ಕಿಂತ ಬಹಳ ಹೆಚ್ಚು ವಿಶಾಲ ಗೊಳಿಸಿದ್ದಾನೆ. ಜಮಾಅತಿನ ನಿಝಾಮ್ ಮೂಲಕ ಸಹ ಅತಿಥಿ ಸತ್ಕಾರ ನಡೆಸಲಾಗುತ್ತಿದೆ. ಆದರೆ ಸಹಾಬರ ಸ್ಥಿತಿ ಆ ರೀತಿ ಇರಲಿಲ್ಲ. ಕೇಂದ್ರೀಕೃತ ನಿಝಾಮ್ ಸಹ ಇರಲಿಲ್ಲ. ಅವರ ವೈಯಕ್ತಿಕ ಸ್ಥಿತಿ ಸಹ ಉತ್ತಮವಾಗಿರಲಿಲ್ಲ. ಎಂತಹ ಘಟನೆಗಳು ವರದಿಯಾಗಿವೆ ಎಂದರೆ ಮಕ್ಕಳನ್ನು ಹಸಿದಿರುವಾಗ ನಿದ್ರಿಸಲು ಬಿಡಲಾಯಿತು. ಪತಿ ಪತ್ನಿಯರೂ ಏನೂ ತಿನ್ನಲಿಲ್ಲ. ಅವರ ಬಳಿ ಇದ್ದ ಅಲ್ಪ ಸ್ವಲ್ಪ ಆಹಾರ ಅತಿಥಿಗೆ ನೀಡಿದರು. ಅವರ ಈ ಕರ್ಮವನ್ನು ಅಲ್ಲಾಹನೂ ಮೆಚ್ಚಿದನು. ಅವನು ಸಂತೋಷಗೊಂಡು ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಆ ಘಟನೆಯ ಬಗ್ಗೆ ತಿಳಿಸಿದನು. ಅಂತಹ ಜನರ ನಡೆವಳಿಕೆಗಳನ್ನು ಮೈಗೂಡಿಸಲು ನಮಗೆ ಆಜ್ಞೆ ಇದೆ. ಅವರು ತ್ಯಾಗಮಾಡಿ ಅತಿಥಿ ಸತ್ಕಾರ ಮಾಡುತ್ತಿದ್ದರು. ಈಗ ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ನಲ್ಲಿರುವ ಬಹಳ ಜನರು ತ್ಯಾಗ ಮನೋಭಾವದಿಂದ ಅತಿಥಿ ಸತ್ಕಾರ ಮಾಡುತ್ತಿದ್ದಾರೆ. ನಾವು ಹಾಗೆಯೇ ಮಾಡಬೇಕಾಗಿದೆ. ಡ್ಯೂಟಿಯಲ್ಲಿರುವ ಕಾರ್ಯಕರ್ತರಲ್ಲಿ ಪ್ರತಿಯೊಬ್ಬನು ಶೇಕಡಾ ನೂರರಷ್ಟು ತ್ಯಾಗ ಮನೋಭಾವದಿಂದ ಸುಸ್ವಭಾವವನ್ನು ಪ್ರಕಟಿಸುತ್ತಾ ಅತಿಥಿ ಸತ್ಕಾರ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಎಂತಹ ಅನೇಕ ಘಟನೆಗಳಿವೆ ಎಂದರೆ ಅವರು ಅತಿಥಿಗಳನ್ನು ಸಂತೋಷ ಪಡಿಸಿದ ಬಗ್ಗೆ ಮತ್ತು ಅವರ ಅತಿಥಿ ಸತ್ಕಾರದ ಉನ್ನತ ಮಟ್ಟದ ಬಗ್ಗೆ ವಿವರಣೆಗಳಿವೆ.

ಒಮ್ಮೆ ದೂರ ಪ್ರದೇಶದಿಂದ ಖಾದಿಯಾನಿಗೆ ಆಗಮಿಸಿದ ಅತಿಥಿಗಳು ಲಂಗರ್‌ಖಾನದ ಕೆಲಸಗಾರರ ಅಸಹಕಾರ ಮನೋಭಾವದಿಂದ ಸಿಟ್ಟುಗೊಂಡು ಮರಳಿ ಹೋದರು. ಅದರ ಬಗ್ಗೆ ಸಮಾಚಾರ ದೊರೆತ ಕೂಡಲೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಕ್ಷಣ, ಪಾದರಕ್ಷೆ ಹಾಕಿಕೊಳ್ಳಲು ಸಹ ಕಷ್ಟವಾಗಿರುವ ಸ್ಥಿತಿಯಲ್ಲಿ ಬೇಗ ಬೇಗನೆ ಅತಿಥಿಗಳನ್ನು ಹಿಂಬಾಲಿಸಿದರು. ಅತಿಥಿಗಳು ಟಾಂಗದಲ್ಲಿ ಹೊರಟಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ದೂರದಿಂದ ಕಂಡ ಕೂಡಲೇ ಅವರು ಟಾಂಗಾ ನಿಲ್ಲಿಸಿ ಕೆಳಗೆ ಇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೆಲಸಗಾರರ ವರ್ತನೆ ಬಗ್ಗೆ ಕ್ಷಮೆ ಕೇಳಿ ಮರಳಿ ಬರಲು ಹೇಳಿದರು. ಹಾಗೆ ಅವರು ಟಾಂಗವನ್ನು ತಿರುಗಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಟಾಂಗದಲ್ಲಿ ಬನ್ನಿರಿ. ನಾನು ಕಾಲುನಡೆಯಾಗಿ ಬರುವೆನು. ಅತಿಥಿಗಳು ನಾಚಿಕೆಗೊಂಡು ಟಾಂಗದಲ್ಲಿ ಕುಳಿತುಕೊಳ್ಳದೆ ಕಾಲುನಡೆಯಾಗಿ ಹೋದರು.

ಅವರೆಲ್ಲರೂ ಲಂಗರ್‌ಖಾನ ತಲಪಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅತಿಥಿಗಳ ಗಂಟುಮೂಟೆಗಳನ್ನು ಸ್ವತಃ ಇಳಿಸಲು ತೊಡಗಿದರು. ಆಗ ಮೊದಲೇ ತಮ್ಮ ವರ್ತನೆ ಬಗ್ಗೆ ಲಜ್ಜಿತರಾಗಿದ್ದ ಕೆಲಸಗಾರರು ಮುಂದೆ ಬಂದು ಅತಿಥಿಗಳ ವಸ್ತುಗಳನ್ನು ಇಳಿಸಿದರು. ಅತಿಥಿಗಳ ಆಹಾರ ಮತ್ತು ವಾಸ್ತವ್ಯದ ಬಗ್ಗೆ ಸಮಾಧಾನಕರವಾದ ವ್ಯವಸ್ಥೆ ಆಗುವ ತನಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಿಯೇ ಇದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಕಾರ್ಯಕರ್ತರೊಂದಿಗೆ ಹೇಳಿದರು: ನೋಡಿರಿ, ಬಹಳ ಅತಿಥಿಗಳು ಬರುತ್ತಿದ್ದಾರೆ. ಕೆಲವರ ಪರಿಚಯ ನಿಮಗಿದೆ. ಬೇರೆ ಕೆಲವರ ಪರಿಚಯ ನಿಮಗಿಲ್ಲ. ಆದುದರಿಂದ ನೀವು ಎಲ್ಲರನ್ನೂ ಗೌರವಾರ್ಹರೆಂದು ಗಣಿಸಿ ಅವರ ಸತ್ಕಾರ ಮತ್ತು ಸೇವೆ ಮಾಡಿರಿ. ನೀವು ಅತಿಥಿಗಳಿಗೆ ಸುಖ ನೀಡುವಿರೆಂದು ನನಗೆ ಶುಭ ಪ್ರತೀಕ್ಷೆ ಇದೆ ಎಂದು ಹೇಳಿದರು. ಈ ಶುಭ ಪ್ರತೀಕ್ಷೆಯನ್ನು ನಾವು ಈಗ ಸಹ ಜಾರಿಯಲ್ಲಿರಿಸಬೇಕು.

ಇನ್ನು ನಾನು ಅತಿಥಿಗಳೊಂದಿಗೆ ಸಹ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಒಬ್ಬರಿನ್ನೊಬ್ಬರ ಭಾವನೆಗಳ ಬಗ್ಗೆ ಎಲ್ಲರೂ ಎಂದರೆ ಅತಿಥಿಗಳೂ ಆತಿಥೇಯರೂ ಶ್ರದ್ಧೆ ವಹಿಸಬೇಕು. ಅತಿಥಿಗಳಿಗೆ ಗೌರವ ನೀಡಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಅದೇ ರೀತಿ ಅದು ಅತಿಥಿಗಳೊಂದಿಗೆ ಸಹ ಹೇಳುತ್ತದೆ, ಆತಿಥೇಯರಿಗೆ ಹೆಚ್ಚು ಭಾರ ನೀಡಬಾರದೆಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಆತಿಥೇಯನ ಮನೆಯಲ್ಲಿ ಹೆಚ್ಚು ದಿನಗಳ ಕಾಲ ಇರುವುದು ಆತಿಥೇಯನ ಮೇಲೆ ಭಾರ ಹಾಕುವುದಾಗಿದೆ. ಅದು ನೀವು ಸದಖ ಪಡೆದುಕೊಳ್ಳುವ ಹಾಗಿದೆ. ಆರಂಭದಿಂದ ಕೊನೆಯ ತನಕ ಒಂದೇ ರೀತಿ ಅತಿಥಿ ಸತ್ಕಾರ ಮಾಡುವ ಸ್ಥಿತಿಯಲ್ಲಿ ಎಲ್ಲರೂ ಇರುವುದಿಲ್ಲ. ಆದುದರಿಂದ ಆತಿಥೇಯನ ಸ್ಥಿತಿಯ ಬಗ್ಗೆ ಗಮನಿಸಿರಿ ಎಂದು ಅತಿಥಿಗೆ ಆಜ್ಞೆ ನೀಡಲಾಗಿದೆ. ಮತ್ತೊಂದು ವಿಷಯ ನಾನು ಹೇಳಬಯಸುವುದೇನೆಂದರೆ, ನಮ್ಮ ಈ ಜಲ್ಸಕ್ಕೆ ಆಗಮಿಸಿದ ಅತಿಥಿ ಒಂದು ತಿಂಗಳ ಕಾಲ ಇಲ್ಲಿ ವಾಸಿಸಿದರೂ ಅವರಿಗೆ ಆತಿಥ್ಯ ನೀಡಬೇಕು. ಮೂರು ನಾಲ್ಕು ದಿನಗಳ ನಂತರ ಆತಿಥ್ಯದ ಕಾಲ ಮುಗಿದು ಹೋಗುತ್ತದೆ ಎಂದು ಭಾವಿಸಬೇಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಕೆಲಸಗಳನ್ನು ವಿವರಿಸುತ್ತಾ ಲಂಗರ್‌ಖಾನದ ಸ್ಥಾಪನೆ ಸಹ ಅದರ ಒಂದು ಶಾಖೆ ಎಂದು ಹೇಳಿದ್ದಾರೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲಂಗರ್‌ಗೆ ಆಗಮಿಸುವವರೊಂದಿಗೆ ಅತ್ಯುತ್ತಮ ಸ್ವಭಾವ ಗುಣದಿಂದ ವರ್ತಿಸಬೇಕು.

ಇನ್ನೊಂದು ಆಜ್ಞೆ ಸುಂದರ ಸಮಾಜದ ನಿರ್ಮಾಣಕ್ಕೋಸ್ಕರವಾಗಿದೆ. ಜಲ್ಸದ ಪರಿಸರದಲ್ಲಿ ಈ ಆಜ್ಞೆ ಪಾಲಿಸಬೇಕು. ಅದು ಸಲಾಮ್ ಹೇಳುತ್ತಾ ಇರಬೇಕೆಂದಾಗಿದೆ. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವರ್ಗವನ್ನು ಪ್ರವೇಶಿಸುವವರ ಒಂದು ವೈಶಿಷ್ಟ್ಯವಾಗಿ ಹೀಗೆ ಹೇಳಿದ್ದಾರೆ: ಅವರು ಸಲಾಮನ್ನು ಹೇಳುತ್ತಾ ಇರುವವರಾಗುವರು. ಅವರು ಹೀಗೆ ಸಹ ಹೇಳಿದ್ದಾರೆ: ನಿಮಗೆ ಪರಿಚಯವಿರುವವರಿಗೂ ಪರಿಚಯವಿಲ್ಲದವರಿಗೂ ಸಲಾಮ್ ಹೇಳಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದ ಉದ್ದೇಶ ಲಕ್ಷ್ಯಗಳಲ್ಲಿ ಒಂದು ಹೀಗೆಂದು ಹೇಳಿದ್ದಾರೆ: ಜನರು ಜಮಾಯಿಸಿ ಪರಸ್ಪರ ಪ್ರೀತಿಯ ಸಂಬಂಧ ಮತ್ತು ಪರಿಚಯದ ಸಂಬಂಧ ವರ್ಧಿಸಬೇಕು ಎಂದು. ಇದರಿಂದ ಪರಸ್ಪರ ಮನಸ್ತಾಪಗಳೂ ದೂರ ಸರಿಯುವುವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಲೋಕದ ಬಗ್ಗೆ ಪ್ರೀತಿ ತಣ್ಣಗಾಗಿ ಅಲ್ಲಾಹನ ಬಗ್ಗೆ ಮತ್ತು ಅವನ ಸಂದೇಶವಾಹಕರ ಬಗ್ಗೆ ಪ್ರೀತಿ ಹೃದಯದಲ್ಲಿ ಹೆಚ್ಚಾಗಬೇಕಾದುದು ಸಹ ಜಲ್ಸದ ಉದ್ದೇಶಗಳಲ್ಲೊಂದಾಗಿದೆ. ಆದುದರಿಂದ ಈ ಪ್ರೀತಿಯನ್ನು ವರ್ಧಿಸಲು ಜಲ್ಸದ ಕಾರ್ಯಕ್ರಮಗಳಲ್ಲಿ ಭಾಗವಹಿಸಿರಿ ಮತ್ತು ಭಾಷಣಗಳನ್ನು ಆಲಿಸಿ ಚಿಂತಿಸಿರಿ. ಜಲ್ಸದ ಮಧ್ಯದಲ್ಲಿಯೂ ಅತ್ತಿತ್ತ ನಡೆದಾಡುವಾಗಲೂ ಝಿಕ್ರೆ ಇಲಾಹಿ ಮಾಡುತ್ತಾ ಇರಬೇಕು. ನಮಾಝ್ ಬಾಜಮಾಅತಾಗಿ ಶ್ರದ್ಧೆಯಿಂದ ನಿರ್ವಹಿಸಿರಿ. ನಫ್ಲ್ ಮತ್ತು ತಹಜ್ಜುದ್ ನಮಾಝ್‌ಗಳ ಬಗ್ಗೆ ಸಹ ಲಕ್ಷ್ಯ ನೀಡಿರಿ. ಇಲ್ಲಿ ವಾಸ ಮಾಡುವವರು ಇಲ್ಲಿನ ಪರಿಸರವನ್ನು ಪರಿಶುದ್ಧವಾಗಿರಿಸಲು ಪ್ರಯತ್ನಿಸುತ್ತಾ ಇರಬೇಕು. ನೀವು ನಿಮ್ಮ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನಿಸಿರಿ.

ನಾನು ಇಲ್ಲಿನ ವ್ಯವಸ್ಥೆ ಬಗ್ಗೆ ಅತಿಥಿಗಳಿಗೆ ಹೇಳುವುದೇನೆಂದರೆ, ತಾತ್ಕಾಲಿಕವಾದ ವಿಶಾಲ ವ್ಯವಸ್ಥೆಯಲ್ಲಿ ಕೆಲವು ಕೊರತೆಗಳಿರುತ್ತವೆ. ನೀವು ಅಂತಹ ಕೊರತೆಯನ್ನು ಎಲ್ಲಿಯಾದರೂ ಕಂಡರೆ ನಿರ್ಲಕ್ಷಿಸಿರಿ. ಅತಿಥಿಗಳು ಕುಂದು ಕೊರತೆಗಳನ್ನು ನಿವಾರಿಸಲು ಕಾರ್ಯಕರ್ತರಿಗೆ ಸಹಾಯ ಮಾಡಬೇಕು. ನಾನು ನೋಡಿದ್ದೇನೆ ಕೆಲವು ಅತಿಥಿಗಳು ಸ್ವತಃ ಆತಿಥೇಯರಾಗಿ ಕೆಲಸ ಮಾಡುತ್ತಾರೆ. ಇಂತಹ ಭಾವನೆ ಪ್ರತಿಯೊಬ್ಬ ಅಹ್ಮದಿಯಲ್ಲಿರಬೇಕು. ಇದು ಎಂತಹ ವಾಸ್ತವಿಕ ಮನೋಭಾವ ಎಂದರೆ ಅದು ಪರಸ್ಪರ ನಿಷ್ಠೆ ಇರುವ ಸಮಾಜವನ್ನು ಸ್ಥಾಪಿಸುತ್ತದೆ. ಅತಿಥಿಗಳು ಕಾರ್ಯಕರ್ತರನ್ನು ಪರೀಕ್ಷಿಸುತ್ತಾ ತಮ್ಮ ಸಮಯ ಕಳೆಯಬಾರದು. ಅವರು ಆವಶ್ಯಕ ಸಂದರ್ಭಗಳಲ್ಲಿ ಪ್ರತಿ ವಿಭಾಗಕ್ಕೆ ಸಹಾಯ ನೀಡುವವರಾಗಬೇಕು. ಇದೇ ರೀತಿ ಪಾರ್ಕಿಂಗ್ ಮೊದಲಾದುವುಗಳಿಗೆ ಸಂಬಂಧಿಸಿ ರಶ್ (RUSH) ಕಾರಣದಿಂದ ಅಸ್ತವ್ಯಸ್ತತೆ ತಲೆದೋರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕಾರುಗಳಲ್ಲಿ ಬರುವವರು ಸಹನೆ ಮತ್ತು ಧೈರ್ಯದಿಂದ ಕಾರ್ಯಕರ್ತರೊಂದಿಗೆ ಸಂಪೂರ್ಣವಾಗಿ ಸಹಕರಿಸಬೇಕು. ಇದೇ ರೀತಿ ಜಲ್ಸಗಾಹ್‌ನ ಒಳಗೆ ಸ್ಕ್ಯಾನಿಂಗ್ ಮಾಡಲಾಗುವ ಸ್ಥಳಗಳಲ್ಲಿ ಸಹ ಪರಿಪೂರ್ಣವಾಗಿ ಸಹನೆಯನ್ನು ಪ್ರಕಟಿಸಬೇಕು.

ಜಲ್ಸದಲ್ಲಿ ಕುಳಿತಿರುವವರು ತಮ್ಮ ಎಡ ಬಲಗಳಲ್ಲಿ ದೃಷ್ಟಿ ಇರಿಸಬೇಕು. ಅದೇ ರೀತಿ ನಡೆದಾಡುವಾಗ ಸಹ ತಮ್ಮ ಪರಿಸರದ ಬಗ್ಗೆ ನಿಗಾವಹಿಸಿರಿ. ಸೆಕ್ಯುರಿಟಿಗೆ ಸಂಬಂಧಿಸಿ ಜಲ್ಸದ ವ್ಯವಸ್ಥೆ ನಿಮಗೆ ನೀಡುವ ಮಾರ್ಗದರ್ಶನಗಳನ್ನು ಅನುಸರಿಸಿ ವರ್ತಿಸಲು ಪೂರ್ಣವಾಗಿ ಪ್ರಯತ್ನಿಸಿರಿ. ಎಲ್ಲದಕ್ಕಿಂತಲೂ ಮಿಗಿಲಾಗಿ ಜಲ್ಸದ ವಿಜಯ, ಜಲ್ಸದಲ್ಲಿ ಭಾಗವಹಿಸಿದುದರ ಉದ್ದೇಶ ನೆರವೇರಲು, ಪ್ರತಿಯೊಬ್ಬ ದುಷ್ಕರ್ಮಿಯ ದುಷ್ಕೃತ್ಯಗಳಿಂದ ರಕ್ಷಣೆ ಪಡೆಯಲು, ಸ್ಥಿರವಾಗಿ ದುಆ ಮಾಡುತ್ತಾ ಇರಬೇಕು. ಪಾಕಿಸ್ಥಾನದಲ್ಲಿರುವ ಅಹ್ಮದಿಯರ

ಸ್ಥಿತಿಯ ಬಗ್ಗೆಯೂ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಶಾಂತಮಯ ಜೀವನ ದಯಪಾಲಿಸಲಿ. ಅಲ್ಲಾಹನು ಅವರನ್ನು ಪ್ರತಿಯೊಂದು ಕೆಡುಕಿನಿಂದ ರಕ್ಷಿಸಲಿ. ಶತ್ರುಗಳ ಹೊಸ ಮತ್ತು ಹಳೆಯ ಯೋಜನೆಗಳನ್ನು ಅಲ್ಲಾಹನು ವಿಫಲಗೊಳಿಸುವವನಾಗಲಿ.

ಒಂದು ಪ್ರಕಟಣೆಯಿದೆ: ಎಂ.ಟಿ.ಎ. ವತಿಯಿಂದ ಅವರ ಒಂದು ಹೊಸ ಆ್ಯಪ್ ಜಾರಿಗೊಳಿಸಲಾಗುತ್ತಿದೆ. ಅದು ಸ್ಮಾರ್ಟ್ ಟಿ.ವಿ ಆ್ಯಪ್ ಆಗಿದೆ. ಈ ಆ್ಯಪನ್ನು ಡೌನ್‌ಲೋಡ್ ಮಾಡಿ ಎಲ್.ಜಿ, ಫಿಲಿಪ್ಸ್, ಎಮರ್ಸೋನ್, ಫಾಯರ್ ಟಿ.ವಿ, ಸೋನಿ, ಎಂಡ್ರೋಯಿಡ್ ಟಿ.ವಿ ಸೆಟ್ ಮೂಲಕ ಡಿಶ್ ಆ್ಯಂಟಿನ ರಹಿತವಾಗಿ ಎಂ.ಟಿ.ಎ.ದ ಎಲ್ಲಾ ಚ್ಯಾನೆಲ್‌ಗಳನ್ನು ಕಾಣಬಹುದಾಗಿದೆ. ಅಲ್ಲಾಹನ ಅನುಗ್ರಹದಿಂದ ವಿದೇಶಗಳಲ್ಲಿರುವವರು ಇದರ ಲಾಭ ಪಡೆಯಬಹುದು. ಜುಮುಅದ ನಂತರ ಇದನ್ನು ಲಾಂಚ್ ಮಾಡಲಾಗುವುದು. ಅಲ್ಲಾಹನು ಜಲ್ಸವನ್ನು ಪ್ರತಿಯೊಂದು ರೀತಿಯಲ್ಲಿಯೂ ಅನುಗ್ರಹಭರಿತವನ್ನಾಗಿ ಮಾಡಲಿ. ನಿಮಗೆಲ್ಲರಿಗೂ ಅದರಿಂದ ಪೂರ್ಣವಾಗಿ ಲಾಭ ಪಡೆಯುವ ಭಾಗ್ಯ ಲಭಿಸಲಿ – ಆಮೀನ್.

—————————*****—————————

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-


***Friday Sermon delivered by Hadrath Khaleefatul Masih Al Khamis(atba)***

*At Hadeeqatul Mahdi, Alton, UK. On 02-08-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



**Email**: *khutuba.kannada@gmail.com*



**You can find all the Sermons archived at**: www.alislam.org/friday-sermon